

بِسۡمِ اللّٰہِ الرَّحۡمٰنِ الرَّحِیۡمِ

# ಉತ್ಕೃಷ್ಟ ಸ್ವಭಾವ ಗುಣಗಳು – ಸಕಲ ಸತ್ಕರ್ಮಗಳ ಕೀಲಿಗೈ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **02-03-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಉನ್ನತಮಟ್ಟದ ನೈತಿಕ ಗುಣಗಳನ್ನು ಹೊಂದಲು, ಪ್ರತಿಯೊಂದು ಸಂದರ್ಭದಲ್ಲಿ ಒಳ್ಳೆಯ ಸ್ವಭಾವ ಗುಣಗಳನ್ನು ಪ್ರಕಟಿಸಲು, ಮನೆಯಲ್ಲಿಯೂ ಸಮಾಜದಲ್ಲಿಯೂ ಪ್ರತಿಯೊಂದು ಹಂತದಲ್ಲಿ ಉನ್ನತ ನೈತಿಕ ಗುಣಗಳನ್ನು ತೋರಿಸಲು ಹಾಗೂ ತಮ್ಮವರೊಂದಿಗೂ ಅನ್ಯರೊಂದಿಗೂ ಒಳ್ಳೆಯ ನೈತಿಕ ಗುಣಗಳನ್ನು ಪ್ರಕಟಿಸಲು ಇಸ್ಲಾಮ್ ಧರ್ಮದಲ್ಲಿ ಯಾವ ರೀತಿ ಉಪದೇಶ ನೀಡಲಾಗಿದೆಯೋ ಅಂತಹ ಸವಿಸ್ತಾರವಾದ ಉಪದೇಶಗಳು ಬೇರೆ ಯಾವ ಧರ್ಮದಲ್ಲಿಯೂ ಕಾಣಲ್ಪಡುವುದಿಲ್ಲ. ಆದರೆ ದುರ್ಭಾಗ್ಯವಶಾತ್ ಇಂದಿನ ಕಾಲದಲ್ಲಿ ನೈತಿಕ ಗುಣಗಳಿಗೆ ಸಂಬಂಧಿಸಿ ಅತ್ಯಂತ ಕೆಳಮಟ್ಟದಲ್ಲಿರುವವರು ಮುಸ್ಲಿಮರೆಂದು ಅನ್ಯರಿಂದ ಗ್ರಹಿಸಲ್ಪಡುತ್ತಿದ್ದಾರೆ. ಮುಸ್ಲಿಮೇತರರು ಅವರ ವಿರುದ್ಧ ಬೊಟ್ಟು ಮಾಡುತ್ತಾರೆ. ಏಕೆಂದರೆ ಅವರು ಮಾಡುವ ಕೆಲಸಗಳು ಅವರ ಮಾತುಗಳಿಗೆ ವಿರುದ್ಧವಾಗಿರುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಮುದಾಯದ ಜನರು ಅತ್ಯುನ್ನತ ಮಟ್ಟದ ನೈತಿಕ ಗುಣಗಳನ್ನು ಗಳಿಸಬೇಕೆಂಬುದರ ಬಗ್ಗೆ ಒತ್ತಿ ಹೇಳಿರುತ್ತಾರೆ. ಸಾಮಾನ್ಯವಾಗಿ ಮುಸ್ಲಿಮರು ಎಲ್ಲರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವುದಾಗಿ ವಾದಿಸುತ್ತಾರೆ. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಅನುಸರಿಸುವುದು ಮತ್ತು ಅವರ ನಡೆವಳಿಕೆಗಳನ್ನು ಅನುಷ್ಠಾನಕ್ಕೆ ತರುವುದು ಇಲ್ಲವೆಂದೇ ಹೇಳಬೇಕು. ಮುಸ್ಲಿಮರ ಈ ಸ್ಥಿತಿಯನ್ನು ಗಮನಿಸಿ ಅವರ ಈ ಸ್ಥಿತಿಯನ್ನು ಹೋಗಲಾಡಿಸಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಿಯೋಜಿಸಿದನು. ಆದರೆ ಮುಸ್ಲಿಮರು ಅವರ ಕಡೆಗೆ ಗಮನಿಸಲು ನಿರಾಕರಿಸುತ್ತಾರೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿರುದ್ಧ ಮತ್ತು ಅವರನ್ನು ನಂಬುವವರ ವಿರುದ್ಧ ಅತ್ಯಂತ ಕೊಳಕು ಭಾಷೆಯನ್ನು ಬಳಸುತ್ತಾರೆ. ಅವರು ಅದರ ಪರಿಣಾಮವನ್ನು ಸಹ ಅನುಭವಿಸುತ್ತಾ ಇದ್ದಾರೆ. ನಾನು ಹೇಳಿದ ಹಾಗೆ ಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಮುಸ್ಲಿಮೇತರರು ಅವರ ವಿರುದ್ಧ ಬೊಟ್ಟು ಮಾಡುತ್ತಿದ್ದಾರೆ. ಅಹ್ಮದಿಯೇತರ ಮುಸ್ಲಿಮರ ಈ ಸ್ಥಿತಿ, ಅಹ್ಮದಿಯರಾದ ನಾವು ನಮ್ಮ ಪರಿಪೂರ್ಣವಾದ ಪ್ರಯತ್ನದೊಂದಿಗೆ ಉನ್ನತ ಮಟ್ಟದ ನೈತಿಕ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಬೇಕು ಎಂಬುದರ ಕಡೆಗೆ ನಮ್ಮ ಶ್ರದ್ಧೆಯನ್ನು ಸೆಳೆಯುತ್ತದೆ. ಅವು ಇಸ್ಲಾಮ್ ಧರ್ಮದ ಉಪದೇಶಗಳ ಪ್ರಕಾರ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ನಡೆವಳಿಕೆ ಪ್ರಕಾರ ನಮಗೆ ತೋರಿಸಿಕೊಟ್ಟವುಗಳಾಗಿವೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳನ್ನು ನಾವು ನೋಡುವುದಾದರೆ ಅವುಗಳಲ್ಲಿ ಆಶ್ಚರ್ಯಕರವಾದ ಉನ್ನತಮಟ್ಟ ಕಾಣಿಸುತ್ತವೆ. ಅವರ ಕೌಟುಂಬಿಕ ಸ್ಥಿತಿಯ ಬಗ್ಗೆ ನೋಡುವುದಾದರೆ ಒಬ್ಬ ಪತ್ನಿ, ಇನ್ನೊಬ್ಬ ಪತ್ನಿ ಕಡಿಮೆ ಎತ್ತರದವಳಾಗಿದ್ದ ಕಾರಣ ಪರಿಹಾಸ ಮಾಡಿದಾಗ ಅದರ ಬಗ್ಗೆ ತೀವ್ರ ಅತೃಪ್ತಿಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಕಟಿಸಿದುದಾಗಿ ಕಾಣುತ್ತೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕಳ ನೈತಿಕ ಗುಣಗಳನ್ನು ಉನ್ನತಗೊಳಿಸಲು ಉಪದೇಶಿಸುತ್ತಾರೆ: ಹಣ್ಣುಗಳು ಇರುವ ಮರಗಳ ಮೇಲೆ ಕಲ್ಲೆಸೆದು ಹಣ್ಣುಗಳನ್ನೂ ಕಾಯಿಗಳನ್ನೂ ಉದುರಿಸಿ ಜನರಿಗೆ ನಷ್ಟವನ್ನುಂಟುಮಾಡಬೇಡಿರಿ ಎಂದು ಉದೇಶಿಸುತ್ತಾರೆ. ಒಬ್ಬ ಹುಡುಗ ತನ್ನ ಕೈಯನ್ನು ವೇಗವಾಗಿ ಊಟದ ತಟ್ಟೆಗೆ ಹಾಕುವಾಗ ಹೇಳಿದರು: ಮೊದಲು ಬಿಸ್ಮಿಲ್ಲಾಹ್ ಹೇಳಿ ಅನಂತರ ಬಲಗೈಯಿಂದ ಊಟ ಮಾಡು. ನಿನ್ನ ಮುಂಬಾಗದಿಂದ ತಿನ್ನಲು ಪ್ರಾರಂಭಿಸು ಎಂದು ಹೇಳುತ್ತಾರೆ. ಆದುದರಿಂದ ನಾವು ಮಕ್ಕಳಿಗೆ ಈ ರೀತಿ ತರಬೇತಿ ನೀಡಬೇಕು. ಹಾಗೆ ಮಾಡಿದರೆ ಅವರು ದೊಡ್ಡವರಾದ ನಂತರ ಉನ್ನತ ನೈತಿಕ ಗುಣ ಪ್ರಕಟಿಸುವವರಾಗುವರು.

ಅದೇ ರೀತಿ ಸುಳ್ಳು ಹೇಳುವುದು ಒಂದು ಪಾಪವಾಗಿದೆ. ಸತ್ಯ ಹೇಳುವುದು ಒಂದು ಸದ್ಗುಣವಾಗಿದೆ. ಈ ವಿಷಯವನ್ನು ಬಾಲ್ಯಕಾಲದಿಂದಲೇ ಮಕ್ಕಳ ಹೃದಯಗಳಲ್ಲಿ ಸ್ಥಾಪಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶ ನೀಡುತ್ತಿದ್ದರು. ಒಬ್ಬ ಸಹಾಬಿ ತನ್ನ ಬಾಲ್ಯದ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಮನೆಗೆ ಬಂದಿದ್ದರು. ಅವರು ಮನೆಯಲ್ಲಿರುವಾಗಲೇ ನಾನು ಮನೆಯಿಂದ ಹೊರಗೆ ಆಟವಾಡಲು ಹೋಗಲು ತೊಡಗಿದಾಗ ನನ್ನ ತಾಯಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಪರಿಸರದಿಂದ ದೂರ ಹೋಗುವುದನ್ನು ತಡೆಯಲು ನನ್ನೊಂದಿಗೆ ಹೇಳಿದರು, ನೀನು ಇಲ್ಲಿ ಬಾ. ಇಲ್ಲಿಯೇ ಇರು. ನಾನು ನಿನಗೆ ಒಂದು ವಸ್ತುವನ್ನು ಕೊಡುವೆನು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ತಾಯಿಯೊಂದಿಗೆ ಕೇಳಿದರು: ನೀವು ನಿಜವಾಗಿಯೂ ಅವನಿಗೆ ಏನಾದರೂ ಕೊಡಲು ಬಯಸಿದ್ದೀರಾ? ನನ್ನ ತಾಯಿ ಹೇಳಿದರು: ಹೌದು ನಾನು ಅವನಿಗೆ ಒಂದು ಖರ್ಜೂರ ಕೊಡುವೆನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಹಾಗೆ ನಿರ್ಧರಿಸದೆ ಕೇವಲ ಹುಡುಗನನ್ನು ಕರೆಯಲು

ಹೀಗೆ ಹೇಳಿದ್ದರೆ ನೀವು ಸುಳ್ಳು ಹೇಳಿದ ಪಾಪದೋಷವನ್ನು ಹೊಂದುವವರಾಗುತ್ತಿದ್ದಿರಿ ಎಂದು ಹೇಳಿದರು. ನೋಡಿರಿ, ಆ ಚಿಕ್ಕ ಹುಡುಗನಿಗೆ ಚಿಕ್ಕ ವಯಸ್ಸಿನಲ್ಲಿಯೇ ಸತ್ಯದ ಮಹತ್ವ ತಿಳಿಯುವಂತಾಯಿತು. ಸುಳ್ಳಿನ ಬಗ್ಗೆ ತಿರಸ್ಕಾರ ಭಾವನೆ ಸೃಷ್ಟಿಯಾಯಿತು. ಆ ಬಾಲಕ ದೊಡ್ಡವನಾಗುವ ತನಕ ಆ ಘಟನೆ ನೆನಪಿನಲ್ಲಿರಿಸಿ ವಿವರಿಸಿದನು.

ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬ ವ್ಯಕ್ತಿಗೆ ಹೇಳಿದರು: ನಿನ್ನ ಎಲ್ಲ ಕೆಡುಕುಗಳನ್ನು ಬಿಟ್ಟುಬಿಡಲು ನಿನಗೆ ಸಾಧ್ಯವಿಲ್ಲವಾದರೆ ನೀನು ಸುಳ್ಳು ಹೇಳುವುದನ್ನು ಮೊದಲು ತ್ಯಜಿಸು. ಇಂದಿನ ಕಾಲದ ಮುಸ್ಲಿಮರು ಇಷ್ಟು ಸೂಕ್ಷ್ಮ ಮಟ್ಟದಲ್ಲಿ ಸುಳ್ಳಿನಿಂದ ತಮ್ಮನ್ನು ರಕ್ಷಿಸಿಕೊಂಡು ಸತ್ಯದಲ್ಲಿ ನೆಲೆ ನಿಂತಿರುವರೇ? ನಾವು ಸಹ ನಮ್ಮನ್ನು ಪರಿಶೋಧಿಸಬೇಕಾಗಿದೆ. ಏನು, ನಮ್ಮ ನೈತಿಕ ಮಟ್ಟ ಸಹ ಆ ರೀತಿ ಇದೆಯೇ? ಒಂದು ರಿವಾಯತ್ ಈರೀತಿಯಿದೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದೊಡ್ಡ ಪಾಪಗಳು ಯಾವುವು ಎಂದು ವಿವರಿಸುತ್ತಾ ಹೇಳಿದರು: ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸುವುದು, ಮಾತಪಿತರಿಗೆ ಅವಿಧೇಯತೆ ತೋರಿಸುವುದು ಇವು ದೊಡ್ಡ ಪಾಪಗಳಾಗಿವೆ. ಹದೀಸು ವರದಿಗಾರ ಹೇಳುತ್ತಾರೆ: ಮೇಲಿನ ಮಾತುಗಳನ್ನು ಹೇಳುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಿಂಬಿಗೆ ಒರಗಿ ಕುಳಿತಿದ್ದರು. ಅನಂತರ ಅವರು ಎದ್ದು ಕುಳಿತು ಹೇಳಿದರು: ಲಕ್ಷ್ಯವಿಟ್ಟು ಕೇಳಿರಿ, ಸುಳ್ಳು ಹೇಳುವುದು ಮತ್ತು ಸುಳ್ಳು ಸಾಕ್ಷ್ಯ ಹೇಳುವುದು ದೊಡ್ಡ ಪಾಪಕೃತ್ಯಗಳಾಗಿವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಮಾತನ್ನು ಅನೇಕ ಸಾರಿ ಪುನರಾವರ್ತಿಸಿದರು. ಹದೀಸಿನ ವರದಿಗಾರ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೌನವನ್ನು ಅವಲಂಬಿಸಿದರೆ ಎಷ್ಟು ಚೆನ್ನಾಗಿತ್ತು ಎಂದು ನಾವು ಯೋಚಿಸಿದೆವು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಇನ್ನೊಂದು ಸದ್ಗುಣವನ್ನು ನಾವು ಈ ರೀತಿ ಕಾಣುತ್ತೇವೆ: ಒಮ್ಮೆ ಒಬ್ಬ ಗ್ರಾಮೀಣ ಅರಬಿ ಮಸ್‌ಜಿದ್‌ನಲ್ಲಿ ಮೂತ್ರ ವಿಸರ್ಜನೆ ಮಾಡಿದನು. ಜನರು ಆತನನ್ನು ತಡೆಯಲು ಮುಂದಾದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅವನನ್ನು ಬಿಟ್ಟುಬಿಡಿರಿ, ಮೂತ್ರ ಮಾಡಿದ ಸ್ಥಳಕ್ಕೆ ನೀರು ಹಾಯಿಸಿರಿ. ಅನಂತರ ಹೇಳಿದರು: ನೀವು ಜನರಿಗೆ ಸೌಲಭ್ಯ ಒದಗಿಸಲು ಸೃಷ್ಟಿಸಲ್ಪಟ್ಟಿರುವಿರಿ. ಜನರಿಗೆ ಕಷ್ಟಕೊಡಲಿಕ್ಕಲ್ಲ. ಆ ಗ್ರಾಮೀಣ ಅರಬಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಔದಾರ್ಯವನ್ನು ಯಾವಾಗಲೂ ಪ್ರಸ್ತಾಪಿಸುತ್ತಿದ್ದನು.

ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ಒಳ್ಳೆಯದು ಮಾಡುತ್ತಿರುವಿರೋ ಅಥವಾ ಕೆಟ್ಟದು ಮಾಡುತ್ತಿರುವಿರೋ ಎಂದು ತಿಳಿಯಲು ನಿಮ್ಮ ನೆರೆಹೊರೆಯವರ ಕಡೆಗೆ ನೋಡಿರಿ, ಅವರು ನಿಮ್ಮ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದಾರೆ ಎಂದು. ಅಧಿಕಾರಿಗಳೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ನೀವು ನಿಮ್ಮನ್ನು ಸಮುದಾಯದ ಸೇವಕರೆಂದು ಗ್ರಹಿಸಿಕೊಂಡು ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯದೊಂದಿಗೆ ಜನರ ಸೇವೆ ಮಾಡುವಾಗಲೇ ನಿಮ್ಮ ಉನ್ನತ ಸ್ವಭಾವಗುಣ ಪ್ರಕಟವಾಗುವುದು. ನಮ್ಮ ರಾಜಕೀಯ ನಾಯಕರಲ್ಲಿ ಮತ್ತು ಅಧಿಕಾರಿಗಳಲ್ಲಿ ಈ ಉತ್ತಮ ಗುಣ ಕಾಣಿಸುತ್ತಿದೆಯೇ? ನಮ್ಮ ಜಮಾಅತಿನ ಹುದ್ದೇದಾರರು ಸಹ ಈ ವಿಷಯದ ಕಡೆಗೆ ಗಮನ ಹರಿಸಬೇಕಾಗಿದೆ. ಮಕ್ಕ ವಿಜಯದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂತಹ ಉನ್ನತ ನೈತಿಕ ಮಟ್ಟವನ್ನು ಪ್ರಕಟಿಸಿದರೆಂದು ನೋಡಿರಿ. ಅವರು ಕಠಿಣ ಶತ್ರುಗಳನ್ನೂ ಕ್ಷಮಿಸಿದರು. ತನಗೆ ನಿರಂತರ ಹಿಂಸೆ ನೀಡಿದವರನ್ನು ಕ್ಷಮಿಸಿದರು. ಈ ಕ್ಷಮೆಯ ಕಾರಣದಿಂದ ಬಹುಸಂಖ್ಯೆಯಲ್ಲಿ ಜನರು ಮುಸ್ಲಿಮರಾದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉನ್ನತ ಸ್ವಭಾವ ಗುಣದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಹೋನ್ನತನಾದ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿತ್ತಾನೆ, **ವಇನ್ನಕ ಲಅಲಾ ಖುಲುಖಿನ್ ಅಝೀಮ್.** ದಿಟವಾಗಿಯೂ ನೀನು ಮಹೋನ್ನತವಾದ ನೈತಿಕ ಗುಣಗಳನ್ನು ಹೊಂದಿರುವೆ.(೬೮:೫). ಇದರ ಅರ್ಥವೇನೆಂದರೆ ಔದಾರ್ಯ, ಶೌರ್ಯ, ನ್ಯಾಯನಿಷ್ಠೆ, ಕಾರುಣ್ಯ, ಪರೋಪಕಾರ, ಸತ್ಯ, ಧೈರ್ಯ ಮೊದಲಾದ ಎಲ್ಲಾ ಸದ್ಗುಣಗಳು ನಿನ್ನಲ್ಲಿ ಸಮಾವೇಶಗೊಂಡಿವೆ.

ಉನ್ನತ ನೈತಿಕ ಗುಣಗಳನ್ನು ಪ್ರಕಟಿಸುವ ವಿವಿಧ ಸ್ಥಿತಿಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಮನುಷ್ಯನ ಸ್ವಭಾವಗುಣ ಯಾವಾಗಲೂ ಎರಡು ವಿಧಗಳಲ್ಲಿ ಪ್ರಕಟವಾಗುತ್ತದೆ– ಪರೀಕ್ಷೆಯ ಕಾಲಘಟ್ಟದಲ್ಲಿ ಮತ್ತು ಬಹುಮಾನಗಳಿಸಿದ ಕಾಲಘಟ್ಟದಲ್ಲಿ. ಮನುಷ್ಯನು ಒಂದೇ ಸ್ಥಿತಿಯಲ್ಲಿದ್ದರೆ ಮತ್ತು ಬೇರೆ ಒಂದು ಸ್ಥಿತಿಯಲ್ಲಿ ಇಲ್ಲದಿದ್ದರೆ ಅವರ ನೈತಿಕ ಗುಣ ಹೇಗಿದೆ ಎಂದು ತಿಳಿಯಲು ಸಾಧ್ಯವಾಗದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೈತಿಕ ಗುಣಗಳನ್ನು ಅಲ್ಲಾಹನು ಪರಿಪೂರ್ಣಗೊಳಿಸಲು ಇಚ್ಛಿಸಿದ ಕಾರಣ ಅವರ ಜೀವಿತದ ಒಂದು ಭಾಗ ಮಕ್ಕದಲ್ಲಿ ಇನ್ನೊಂದು ಭಾಗ ಮದೀನದಲ್ಲಿ ಕಳೆಯಿತು. ಮಕ್ಕದ ಶತ್ರುಗಳು ಬಹಳ ಹೆಚ್ಚು ಕಷ್ಟಕ್ಕೊಳಪಡಿಸಿದರೂ ಪೈಗಂಬರರು ಸಹನೆದೋರಿದರು. ಶತ್ರುಗಳು ಅತ್ಯಂತ ತೀವ್ರವಾಗಿ ಹಿಂಸೆ ನೀಡಿದ್ದರೂ ಅವರೊಂದಿಗೆ ಸಹನೆಯಿಂದ ವರ್ತಿಸುತ್ತಿದ್ದರು. ಅಲ್ಲಾಹನಿಂದ ದೊರೆತ ಸಂದೇಶವನ್ನು ಪ್ರಚಾರ ಮಾಡುವುದರ ಬಗ್ಗೆ ಅವರು ಹಿಂಜರಿಯಲಿಲ್ಲ. ನಂತರ ಮದೀನದಲ್ಲಿ ಅವರು ಯಶಸ್ಸನ್ನು ಗಳಿಸಿದಾಗ ಶತ್ರುಗಳು ಸೆರೆಹಿಡಿಯಲ್ಪಟ್ಟು ಅವರ ಮುಂದೆ ಹಾಜರುಗೊಳಿಸಲ್ಪಟ್ಟಾಗ ಅವರಲ್ಲಿ ಬಹುತೇಕ ಜನರಿಗೆ ಕ್ಷಮಾದಾನ ನೀಡಿದರು. ಅವರ ಈ ಉನ್ನತ ಸ್ವಭಾವಗುಣ

ಜನರು ಅವರನ್ನು ಹಿಂಬಾಲಿಸುವಂತೆ ಮಾಡಿತು. ಈ ರೀತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಂದು ಪವಾಡ ಪ್ರಕಟಿಸಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಸಹ ಈ ನಡೆವಳಿಕೆಯನ್ನು ಅನುಸರಿಸಿ ನಿಮ್ಮ ನೈತಿಕ ಗುಣಗಳನ್ನು ಒಳ್ಳೆಯದನ್ನಾಗಿ ಮಾಡಿದರೆ ಮತ್ತು ಪ್ರತಿಯೊಂದು ಸದ್ಗುಣವನ್ನು ಸಂದರ್ಭೋಚಿತವಾಗಿ ಬಳಸುವುದಾದರೆ ನೀವು ಒಂದು ಪವಾಡ ಪ್ರದರ್ಶಿಸುವವರಾಗುವಿರಿ. ಅಮಾನುಷಿಕ ದೃಷ್ಟಾಂತಗಳ ಬಗ್ಗೆ ಜನರು ಏನಾದರೂ ನೆವನ ಹೇಳುತ್ತಾರೆ ಮತ್ತು ಅದನ್ನು ತಿರಸ್ಕರಿಸಲು ಇಚ್ಛಿಸುತ್ತಾರೆ. ಆದರೆ ನೈತಿಕ ಗುಣದ ಪ್ರಕಟಣೆ ಒಂದು ಅದ್ಭುತ ಕೃತ್ಯವೇ ಆಗಿದೆ. ಅದರ ವಿರುದ್ಧ ಆಕ್ಷೇಪಿಸಲು ಯಾರಿಗೂ ಸಾಧ್ಯವಿಲ್ಲ. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎಲ್ಲದಕ್ಕಿಂತಲೂ ದೊಡ್ಡ ಶಕ್ತಿಶಾಲಿ ಪವಾಡವಾಗಿ ಉನ್ನತ ನೈತಿಕ ಗುಣಗಳನ್ನು ನೀಡಲಾಯಿತು. ಅದರ ಬಗ್ಗೆಯೇ ಅಲ್ಲಾಹನು ಹೇಳಿದ್ದಾನೆ, **ವಇನ್ನಕ ಲಅಲಾ ಖುಲುಖಿನ್ ಅಝೀಮ್.**

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪ್ರತಿಯೊಂದು ರೀತಿಯ ಪವಾಡಗಳು ಮತ್ತು ಶಕ್ತಿಸಾಮರ್ಥ್ಯಗಳು ನೀಡಲ್ಪಟ್ಟಿವೆಯಾದರೂ, ಎಲ್ಲಾ ಪ್ರವಾದಿಗಳು ತೋರಿಸಿದ ಅದ್ಭುತ ಕೃತ್ಯಗಳಿಗಿಂತ ಅವು ಶ್ರೇಷ್ಠವಾಗಿದ್ದರೂ ಅವರ ಉನ್ನತ ನೈತಿಕ ಗುಣ ಎಂಬ ಪವಾಡ ಅವೆಲ್ಲವುಗಳಿಗಿಂತ ಪ್ರಥಮ ಸ್ಥಾನದಲ್ಲಿದೆ. ಅದಕ್ಕೆ ಸಮಾನವಾದುದು ಲೋಕದ ಚರಿತ್ರೆಯಲ್ಲಿ ಕಾಣಲು ಸಿಗಲಾರದು. ಪ್ರತಿಯೊಬ್ಬನಿಗೆ ಅವನು ತನ್ನ ದುರ್ಗುಣಗಳನ್ನು ತ್ಯಜಿಸಿ ಸದ್ಗುಣಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದೇ ಒಂದು ಪವಾಡವಾಗಿದೆ ಎಂದು ನಾನು ಭಾವಿಸುತ್ತೇನೆ. ಉದಾಹರಣೆಗೆ ಶೀಘ್ರಕೋಪಿಯಾದ ಒಬ್ಬನು ತನ್ನ ಕೆಟ್ಟ ಸ್ವಭಾವವನ್ನು ತ್ಯಜಿಸಿ ಸಹಿಷ್ಣು ಮನೋಭಾವ ಮತ್ತು ಸಹನೆಯನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದಾದರೆ ಅಥವಾ ಓರ್ವ ಜಿಪುಣನು ತನ್ನ ಜಿಪುಣತನವನ್ನು ಬಿಟ್ಟು ಉದಾರಿಯಾಗುವುದಾದರೆ, ಅಥವಾ ಒಬ್ಬನು ಅಸೂಯೆಯನ್ನು ತ್ಯಜಿಸಿ ಸಹಾನುಭೂತಿ ಹೊಂದುವವನಾದರೆ ಅದೊಂದು ಪವಾಡ ಕೃತ್ಯವೇ ಆಗಿದೆ. ಇದೇ ರೀತಿ ತನ್ನಿಷ್ಟ ಮನೋಭಾವ ಮತ್ತು ಸ್ವಾರ್ಥ ಮನೋಭಾವ ತ್ಯಜಿಸಿ ವಿನಾಯಾನ್ವಿತನಾಗುವುದಾದರೆ ಈ ವಿನಯವನ್ನು ಕೈಕೊಳ್ಳುವುದು ಒಂದು ಪವಾಡವೇ ಆಗಿರುತ್ತದೆ. ಆದುದರಿಂದ ನಿಮ್ಮ ಪೈಕಿ ಪವಾಡ ತೋರಿಸುವವನಾಗಲು ಬಯಸದವನು ಯಾರಿದ್ದಾನೆ. ಮನುಷ್ಯನು ತನ್ನ ಸ್ವಭಾವಗುಣವನ್ನು ತಿದ್ದುವುದು ಒಂದು ಪವಾಡಕೃತ್ಯವೇ ಆಗಿದೆ. ಅದರ ಪರಿಣಾಮ ಎಂದೂ ನಿಷ್ಫಲವಾಗದು. ಅದರ ಲಾಭ ದೂರದ ತನಕ ತಲಪುತ್ತದೆ. ಸತ್ಯವಿಶ್ವಾಸಿ ಸೃಷ್ಟಿ ಮತ್ತು ಸೃಷ್ಟಿಕರ್ತನ ದೃಷ್ಟಿಯಲ್ಲಿ ಅದ್ಭುತ ಕೃತ್ಯ ಪ್ರಕಟಿಸುವವನಾಗಬೇಕು. ನಾವು ಅನೇಕ ಭೋಗಲಾಲಸಿಗಳನ್ನು ನೋಡಿದ್ದೇವೆ. ಅವರು ಯಾವುದೇ ದೃಷ್ಟಾಂತ ಅಂಗೀಕರಿಸುವವರಾಗಿರಲಿಲ್ಲ. ಆದರೆ ನೈತಿಕ ಗುಣಗಳನ್ನು ನೋಡಿ ಅವರು ಸಹ ತಲೆಬಾಗಿದರು. ಅವರಿಗೆ ಉನ್ನತ ಸ್ವಭಾವಗುಣಗಳನ್ನು ಅಂಗೀಕರಿಸದಿರಲು ಸಾಧ್ಯವಿರಲಿಲ್ಲ. ಬಹುತೇಕ ಜನರ ಜೀವನ ಚರಿತ್ರೆಗಳಿಂದ ತಿಳಿಯಬಹುದು ಅವರು ಉನ್ನತ ಸ್ವಭಾವಗುಣಗಳೆಂಬ ಪವಾಡವನ್ನು ಕಂಡು ಸತ್ಯಧರ್ಮವನ್ನು ಸ್ವೀಕರಿಸಿದರು.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಸ್ವಭಾವಗುಣಗಳು ಎರಡು ರೀತಿಗಳಲ್ಲಿವೆ. ಒಂದು ಇಂದಿನ ಕಾಲದಲ್ಲಿ ಆಧುನಿಕ ವಿದ್ಯಾಭ್ಯಾಸ ಗಳಿಸಿದವರು ಪ್ರಕಟಿಸುವುದಾಗಿದೆ. ಅವರು ಭೇಟಿ ಮೊದಲಾದ ಸಂದರ್ಭಗಳಲ್ಲಿ ಮೆಚ್ಚಿಗೆಯ ಮಾತನ್ನಾಡುತ್ತಾರೆ. ಆದರೆ ಹೃದಯಗಳಲ್ಲಿ ಕಾಪಟ್ಯ ಮತ್ತು ಅಸೂಯೆ ಇರುತ್ತದೆ. ಈ ಸ್ವಭಾವಗುಣ ಪವಿತ್ರ ಖುರ್‌ಆನಿಗೆ ವಿರುದ್ಧವಾಗಿದೆ. ಎರಡನೆಯ ಸ್ವಭಾವ ಗುಣ ಸತ್ಯವಾದ ಸಹಾನುಭೂತಿ ಪ್ರಕಟಣೆಯಾಗಿದೆ. ಅದರಲ್ಲಿ ಕಾಪಟ್ಯವಿರುವುದಿಲ್ಲ. ಮುಖಸ್ತುತಿ ಇರುವುದಿಲ್ಲ. ಅಲ್ಲಾಹನು ಹೇಳುತ್ತಾನೆ: **ಇನ್ನಲ್ಲಾಹ ಯಅ್‌ಮುರು ಬಿಲ್‌ಅದ್‌ಲಿ ವಲ್ ಇಹ್‌ಸಾನಿ ವ ಈತಾಯಿಧಿಲ್ ಖುರ್‌ಬಾ.** ನ್ಯಾಯನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. (ಪವಿತ್ರ ಖುರ್‌ಆನ್ ೧೬:೯೧).

ಪರಿಪೂರ್ಣ ನೈತಿಕ ಗುಣ ಹೇಗಿರಬೇಕೆಂದರೆ ನ್ಯಾಯ ಪಾಲನೆ ಮಾಡಬೇಕು. ವಾಸ್ತವಿಕತೆಯನ್ನು ವಿವರಿಸಬೇಕು. ಔದಾರ್ಯ ತೋರಿಸುವ ಆವಶ್ಯಕತೆ ಇರುವಲ್ಲಿ ಔದಾರ್ಯಪೂರ್ಣವಾಗಿ ವರ್ತಿಸಬೇಕು. ಅದಕ್ಕಿಂತ ಮುಂದೆ ಹೋಗಿ ಒಬ್ಬ ತಾಯಿ ತನ್ನ ಮಗುವಿನೊಂದಿಗೆ ವರ್ತಿಸುವ ಹಾಗೆ, ನಿಕಟ ಬಂಧುಗಳೊಂದಿಗೆ ವರ್ತಿಸುವ ಹಾಗೆ ವರ್ತಿಸಬೇಕು. ಇದು ಪರಿಪೂರ್ಣವಾದ ರೀತಿಯಾಗಿದೆ. ಪ್ರತಿಯೊಂದು ಪರಿಪೂರ್ಣ ರೀತಿಯ ಬಗ್ಗೆ ಮಾರ್ಗದರ್ಶನ ಅಲ್ಲಾಹನ ಗ್ರಂಥದಲ್ಲಿದೆ. ಅದರ ಕಡೆಗೆ ವಿಮುಖರಾಗುವವರು ಬೇರೆ ಸ್ಥಳದಿಂದ ಮಾರ್ಗದರ್ಶನ ಪಡೆಯಲಾರರು. ಒಳ್ಳೆಯ ಉಪದೇಶ ಪರಿಣಾಮಕಾರಿಯಾಗಲು ಹೃದಯದ ಪರಿಶುದ್ಧಿ ಆವಶ್ಯಕವಾಗಿದೆ. ಯಾರು ಅದರಿಂದ ದೂರ ಸರಿಯುವರೋ ಅವರ ಕಡೆಗೆ ಆಳವಾಗಿ ದೃಷ್ಟಿ ಬೀರುವುದಾದರೆ ಅವರಲ್ಲಿ ಕೊಳಕು ಕಾಣಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸದ್ಗುಣಗಳು ಇತರ ಸತ್ಕರ್ಮಗಳಿಗೆ ಕೀಲಿಗೈ ಆಗಿದೆ. ತಮ್ಮ ಸ್ವಭಾವಗುಣಗಳನ್ನು ಸುಧಾರಣೆ ಮಾಡದವರು ಕ್ರಮೇಣ ಒಳಿತು ರಹಿತರಾಗುತ್ತಾರೆ. ನನ್ನ ಅಭಿಪ್ರಾಯ ಪ್ರಕಾರ ಲೋಕದಲ್ಲಿ ಪ್ರತಿಯೊಂದು ವಸ್ತು ಪ್ರಯೋಜನಕರವಾಗಿದೆ. ವಿಷ ಮತ್ತು ಮಾಲಿನ್ಯ ಸಹ ಪ್ರಯೋಜನಕರವಾಗಿದೆ. ಆದರೆ ಸದ್ಗುಣಗಳನ್ನು ಗಳಿಸಿ ಜನರಿಗೆ ಪ್ರಯೋಜನಕರವಾಗದವನು ಯಾವುದೇ ಕೆಲಸಕ್ಕೆ ಬರದವನಾಗುತ್ತಾನೆ. ಆದುದರಿಂದ ನೆನಪಿಡಿರಿ ಸ್ವಭಾವಗುಣಗಳನ್ನು ಪರಿಷ್ಕರಿಸುವುದು ಬಹಳ ಆವಶ್ಯಕರವಾಗಿದೆ. ಏಕೆಂದರೆ ಒಳಿತುಗಳ ಮಾತೆ ಸದ್ಗುಣಗಳಾಗಿವೆ. ಕೆಲವು ಜನರ ಸ್ವಭಾವ ಹೇಗಿದೆ ಎಂದರೆ ಅವರು ಯಾಚಕರನ್ನು ಕಂಡರೆ ಉದ್ವೇಗ ಭರಿತರಾಗುತ್ತಾರೆ. ಕೆಲವು ಮೌಲವಿ ಮನೋಭಾವದವರು ಬೇಡುವವನಿಗೆ ಏನಾದರೂ ಕೊಡುವುದನ್ನು ಬಿಟ್ಟು ಪ್ರಶ್ನಿಸಲು

ಪ್ರಾರಂಭಿಸುತ್ತಾರೆ. ಬೇಡುವವನನ್ನು ಸೋಮಾರಿ ಎಂದು ನಿಂದಿಸುತ್ತಾರೆ. ಒಬ್ಬ ಬಿಕ್ಷುಕ ಆರೋಗ್ಯವಂತನಾಗಿದ್ದರೂ ಅವನು ಬೇಡುವವನಾದರೆ ಅದರ ಪಾಪದೋಷ ಅವನಿಗೆ. ಆದರೆ ಬೇಡುವವನಿಗೆ ಏನಾದರೂ ಕೊಡುವುದಾದರೆ ಅದು ಪಾಪವಲ್ಲ. ಹದೀಸಿನಲ್ಲಿ ಹೀಗೆ ವರದಿಯಾಗಿದೆ. **ವ ಲೌ ಅತಾಕ ರಾಕಿಬನ್.** ಎಂದರೆ ಬೇಡುವವನು ಕುದುರೆಯ ಮೇಲೆ ಬಂದರೂ ಅವನಿಗೆ ಏನಾದರೂ ಕೊಡಬೇಕು ಎಂದು. ಪವಿತ್ರ ಖುರ್‌ಆನ್‌ನಲ್ಲಿ **ವಅಮ್ಮಸ್ಸಾಇಲ ಫಲಾ ತನ್‌ಹರ್.** ಯಾಚಿಸುವವರನ್ನು ಝುಂಕಿಸಬೇಡ (೯೩:೧೧) ಎಂದು ಆಜ್ಞಾಪಿಸಲಾಗಿದೆ. ಆದುದರಿಂದ ನೆನಪಿಡಿರಿ ನೀವು ಬೇಡುವವನನ್ನು ನಿಂದಿಸಬಾರದು. ಹಾಗೆ ಮಾಡುವುದು ಒಂದು ರೀತಿಯ ದುರ್ಗುಣದ ಬೀಜ ಬಿತ್ತುತ್ತದೆ. ನೀವು ಬೇಡುವವನ ವಿರುದ್ಧ ಸಿಟ್ಟು ಪ್ರಕಟಿಸಬಾರದು. ಶೈತಾನನು ಈ ರೀತಿ ಸಿಟ್ಟು ಪ್ರಕಟಿಸುವಂತೆ ಮಾಡಿ ನಿಮ್ಮನ್ನು ಒಳಿತಿನಿಂದ ವಂಚಿತರನ್ನಾಗಿ ಮಾಡಲು, ಕೆಡುಕಿನ ವಾರೀಸುದಾರರನ್ನಾಗಿ ಮಾಡಲು ಬಯಸುತ್ತಾನೆ.

ಮತ್ತೊಂದು ವಿಷಯ, ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ತಂದೆ ತಾಯಂದಿರ ಬಗ್ಗೆ ಹೀಗೆ ಪ್ರಶ್ನಿಸುತ್ತಾರೆ– ತಂದೆ ತಾಯಿ ಅಹ್ಮದಿಯರಾಗಿಲ್ಲವಾದರೆ ಅಥವಾ ಅವರು ವಿರೋಧಿಗಳಾಗಿದ್ದರೆ ಅವರೊಂದಿಗೆ ಹೇಗೆ ವರ್ತಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಶೇಖ್ ಅಬ್ದುರ್ರಹ್ಮಾನ್ ಖಾದಿಯಾನಿಯವರೊಂದಿಗೆ ಅವರ ತಂದೆ ತಾಯಂದಿರಿಗೆ ಸಂಬಂಧಿಸಿ ಹೀಗೆ ಉಪದೇಶ ನೀಡಿದರು: ಅವರಿಗೋಸ್ಕರ ಪ್ರಾರ್ಥಿಸಿರಿ. ಪ್ರತಿಯೊಂದು ರೀತಿಯಲ್ಲಿ ಅವರನ್ನು ಸಂತೋಷಪಡಿಸಬೇಕು. ಅವರಿಗೆ ನಿಮ್ಮ ಪರಿಶುದ್ಧ ಸ್ವಭಾವಗುಣ ಮತ್ತು ವರ್ತನೆ ಮೂಲಕ ಇಸ್ಲಾಮ್ ಧರ್ಮದ ಸತ್ಯತೆಯನ್ನು ಅವರು ಅಂಗೀಕರಿಸುವಂತೆ ಮಾಡಿರಿ. ಅವರು ಮುಸ್ಲಿಮೇತರರಾಗಿದ್ದ ಕಾರಣ ಅವರಿಗೆ ಇಸ್ಲಾಮ್ ಧರ್ಮದ ಸತ್ಯತೆ ಮನಗಾಣುವಂತೆ ಮಾಡಬೇಕು. ಸದ್ಗುಣಗಳು ಎಂತಹ ಪವಾಡವೆಂದರೆ ಅದರೆದುರಿಗೆ ಬೇರೆ ಪವಾಡಗಳು ಸಮವಾಗಲಾರವು. ಸತ್ಯವಾದ ಇಸ್ಲಾಮಿನ ಮಾನದಂಡವೇನೆಂದರೆ ಅದರ ಮೂಲಕ ಮನುಷ್ಯನು ಅತ್ಯುನ್ನತ ಮಟ್ಟದ ಸ್ವಭಾವಗುಣವುಳ್ಳವನಾಗುತ್ತಾನೆ. ಅವನೊಬ್ಬ ವಿಶಿಷ್ಟ ವ್ಯಕ್ತಿಯಾಗುತ್ತಾನೆ. ಪ್ರಾಯಶಃ ನಿಮ್ಮ ಮೂಲಕ ಅಲ್ಲಾಹನು ಅವರ ಹೃದಯದಲ್ಲಿ ಇಸ್ಲಾಮಿನ ಬಗ್ಗೆ ಪ್ರೀತಿ ಹುಟ್ಟಿಸಲಿ. ಇಸ್ಲಾಮ್ ತಂದೆ ತಾಯಂದಿರ ಸೇವೆ ಮಾಡುವುದನ್ನು ತಡೆಯುವುದಿಲ್ಲ. ಲೌಕಿಕ ವಿಷಯಗಳಿಗೆ ಸಂಬಂಧಿಸಿ ಅವರಿಗೆ ಪೂರ್ಣವಾಗಿ ಧರ್ಮಕ್ಕೆ ದೋಷಕರವಾಗದ ರೀತಿಯಲ್ಲಿ ವಿಧೇಯರಾಗಬೇಕು. ಅವರ ಸೇವೆ ಹೃತ್ಪೂರ್ವಕವಾಗಿ ಮಾಡಿರಿ.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಸದ್ಗುಣಗಳೇ ಮನುಷ್ಯನ ಮತ್ತು ಮೃಗಗಳ ಮಧ್ಯೆ ಇರುವ ವ್ಯತ್ಯಾಸ ಸೂಚಿಸುತ್ತವೆ. ಮೃಗಗಳು ವಸ್ತುಗಳ ಸ್ಥಿತಿ ಮತ್ತು ಗಾತ್ರದ ಬಗ್ಗೆ ವ್ಯತ್ಯಾಸ ಗುರುತಿಸಲಾರವು. ಅದರ ಮುಂದೆ ಬರುವುದನ್ನು ಎಷ್ಟು ಬರುತ್ತದೆಯೋ ಅಷ್ಟನ್ನು ತಿನ್ನುತ್ತವೆ. ಕೊನೆಗೆ ವಾಂತಿ ಸಹ ಮಾಡುತ್ತದೆ. ಕೆಲವು ಜನರ ಸ್ಥಿತಿ ಸಹ ಹೀಗೆಯೇ ಎಂದು ನಾವು ಇಲ್ಲಿ ನೋಡುತ್ತಿದ್ದೇವೆ. ಅವರ ಲಾಲಸೆ ಕೊನೆಗೊಳ್ಳುವುದಿಲ್ಲ. ಧರ್ಮಬದ್ಧ ಮತ್ತು ನಿಷಿದ್ಧ ರೀತಿಗಳಲ್ಲಿ ಆಹಾರವನ್ನೂ ಸಂಪತ್ತನ್ನೂ ತಿಂದು ಹಾಕಲು ಪ್ರಯತ್ನಿಸುತ್ತಾರೆ. ಎರಡನೆಯದಾಗಿ ಮೃಗಗಳು ಧರ್ಮಬದ್ಧ ಮತ್ತು ನಿಷಿದ್ಧ ಎಂಬುದರ ವ್ಯತ್ಯಾಸ ಮಾಡುವುದಿಲ್ಲ. ಒಂದು ಎತ್ತು ಇದು ಅನ್ಯನ ಹೊಲ ಅದರಲ್ಲಿ ಪ್ರವೇಶಿಸಿ ತಿನ್ನಬಾರದು ಎಂದು ಯೋಚಿಸುವುದಿಲ್ಲ. ನೈತಿಕ ಗುಣಗಳ ತತ್ವಗಳನ್ನು ಮುರಿಯುವವರು ಮನುಷ್ಯರೇ ಅಲ್ಲ. ಅನಾಥರ ಸಂಪತ್ತನ್ನು ತಿಂದು ಹಾಕುವ ಬಗ್ಗೆ ಅವರು ಸಂಕೋಚಪಡುವುದಿಲ್ಲ. ಹೀಗೆ ನಿಷಿದ್ಧ ವಿಧಾನಗಳಿಂದ ಸಂಪಾದಿಸಿ ತಿನ್ನುವವರ ವಾಸಸ್ಥಳ ನರಕವಾಗುತ್ತದೆ. ನೆನಪಿಡಿರಿ, ಎರಡು ಪಾರ್ಶ್ವಗಳಿವೆ. ಒಂದು ದೇವನಿಗೆ ಗೌರವ ನೀಡುವುದು. ಅದಕ್ಕೆ ವಿರುದ್ಧವಾಗಿ ವರ್ತಿಸುವುದು ಸದ್ಗುಣ ವಿರುದ್ಧವಾಗಿದೆ. ಎರಡನೆಯದು ಅಲ್ಲಾಹನ ಸೃಷ್ಟಿಗಳಿಗೆ ಸಹಾನುಭೂತಿ ಪ್ರಕಟಿಸುವುದು. ಯಾರು ಮಾನವರಿಗೆ ವಿರುದ್ಧವಾಗಿರುವನೋ ಅವನು ಸದ್ಗುಣ ರಹಿತನಾಗಿದ್ದಾನೆ.

ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದಿಲ್ಲವಾದರೆ, ಅವನ ಮಹೋನ್ನತ ಸ್ಥಾನವನ್ನು ನಂಬುವುದಿಲ್ಲವಾದರೆ, ಅವನನ್ನು ಆರಾಧಿಸುವುದಿಲ್ಲವಾದರೆ, ಅವನ ಮಾತುಗಳನ್ನು ಲಕ್ಷ್ಯವಿಟ್ಟು ಆಲಿಸುವುದಿಲ್ಲವಾದರೆ, ಅವನ ಸಂಪ್ರೀತಿಗಳಿಸಲು ಪ್ರಯತ್ನಿಸುವುದಿಲ್ಲವಾದರೆ ಅವು ಸದ್ಗುಣವಾಗಲಾರದು. ಅದೇ ರೀತಿ ಜನರ ಹಕ್ಕುಗಳನ್ನು ನೀಡುವುದಿಲ್ಲವಾದರೆ, ಅನ್ಯಾಯದಿಂದ ಜನರ ಸಂಪತ್ತನ್ನು ತಿನ್ನುವುದಾದರೆ, ಅವರಿಗೆ ನಷ್ಟವಾಗುವಂತೆ ಮಾಡಲು ಪ್ರಯತ್ನಿಸುವುದಾದರೆ ಇವು ಸದ್ಗುಣಗಳಿಗೆ ವಿರುದ್ಧವಾಗಿವೆ. ಹಾ, ಮನುಷ್ಯನ ಜೀವಿತದ ಈ ಮುಖ್ಯ ಉದ್ದೇಶಗಳ ಬಗ್ಗೆ ಗಮನ ಹರಿಸುವವರು ಮತ್ತು ಚಿಂತಿಸುವವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ.

ಇನ್ನೊಂದು ಕೆಟ್ಟ ಸ್ವಭಾವ ಅಹಂಭಾವವಾಗಿದೆ. ಅದು ಒಳಿತಿನಿಂದ ವಂಚಿಸುತ್ತದೆ ಮತ್ತು ಅಲ್ಲಾಹನ ಕೋಪಕ್ಕೆ ಗುರಿಪಡಿಸುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸೂಫಿಗಳು ಹೇಳುತ್ತಾರೆ, ಮನುಷ್ಯನೊಳಗೆ ನೀಚ ಗುಣಗಳ ಅನೇಕ ಜಿನ್ನ್‌ಗಳಿವೆ ಇವು ಹೊರಗೆ ಹೋಗುವಾಗ ಒಂದೊಂದಾಗಿ ಹೋಗುತ್ತವೆ. ಆದರೆ ಅಹಂಭಾವೆಂಬ ಜಿನ್ನ್ ಉಳಿದಿರುತ್ತದೆ. ಅದು ಅಲ್ಲಾಹನ ಅನುಗ್ರಹ ಮತ್ತು ಮನುಷ್ಯನ ಸತ್ಯವಾದ ಪರಿಶ್ರಮ ಮತ್ತು ಪ್ರಾರ್ಥನೆ ಮೂಲಕ ಹೊರಗೆ ಹೋಗುತ್ತದೆ. ಬಹಳ ಜನರು ತಮ್ಮನ್ನು ವಿನಯಶಾಲಿಗಳೆಂದು ಭಾವಿಸುತ್ತಾರೆ. ಆದರೆ ಅವರಲ್ಲಿ ಯಾವುದಾದರೊಂದು ರೀತಿಯ ಅಹಂಭಾವ ಇರುತ್ತದೆ. ಆದುದರಿಂದ ಅಹಂಭಾವದ ಸೂಕ್ಷ್ಮಾತಿಸೂಕ್ಷ್ಮ ಅಂಶದಿಂದಲೂ ಸುರಕ್ಷಿತರಾಗಿರಬೇಕು. ಕೆಲವು ಸಾರಿ ಅಹಂಭಾವ ಸಂಪತ್ತಿನ ಕಾರಣದಿಂದಾಗಿರುತ್ತದೆ. ಅಹಂಭಾವಿಯಾದ ಶ್ರೀಮಂತ ಅನ್ಯರನ್ನು ನಿರ್ಗತಿಕರೆಂದು ಗಣಿಸುತ್ತಾನೆ. ನನ್ನನ್ನು ಎದುರಿಸುವವರು ಯಾರಿದ್ದಾರೆ ಎಂದು ಕೇಳುತ್ತಾನೆ. ಕೆಲವು ಸಾರಿ ಕುಟುಂಬ ಮತ್ತು ಜಾತಿಯ ಅಹಂಭಾವವಿರುತ್ತದೆ. ನನ್ನ ಜಾತಿ ಶ್ರೇಷ್ಠ ಇನ್ನೊಬ್ಬ ಕೀಳು ಜಾತಿಯವನು ಎಂದು ಹೇಳುತ್ತಾನೆ. ಕೆಲವು ಸಾರಿ ಅಹಂಭಾವ ಜ್ಞಾನದ ಕಾರಣದಿಂದಲೂ ಹುಟ್ಟುತ್ತದೆ. ಒಬ್ಬನು ತಪ್ಪಾಗಿ

ಹೇಳಿದರೆ ತಕ್ಷಣ ಅವನ ತಪ್ಪು ಪ್ರಕಟಿಸಿ ಬೊಬ್ಬೆ ಹಾಕುತ್ತಾನೆ– ಅವನಿಗೆ ಒಂದು ಶಬ್ದ ಸಹ ಸರಿಯಾಗಿ ಉಚ್ಚರಿಸಲು ಗೊತ್ತಿಲ್ಲ ಎಂದು ಹೇಳುತ್ತಾನೆ. ಒಟ್ಟಿನಲ್ಲಿ ಅಹಂಭಾವದ ಅನೇಕ ರೂಪಗಳಿವೆ. ಇವುಗಳೆಲ್ಲ ಮನುಷ್ಯನನ್ನು ಒಳಿತಿನಿಂದ ವಂಚಿತವನ್ನಾಗಿ ಮಾಡುತ್ತವೆ. ಮತ್ತು ಜನರಿಗೆ ಪ್ರಯೋಜನ ಲಭಿಸುವುದರಿಂದ ತಡೆಯುತ್ತವೆ. ಇವುಗಳಿಂದೆಲ್ಲಾ ರಕ್ಷಿಸಲ್ಪಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತಿಗೆ ಉಪದೇಶಿಸುತ್ತಾ ಹೇಳಿದರು: ಒಬ್ಬನು ತನ್ನ ನೆರೆಹೊರೆಯವನಿಗೆ ತನ್ನ ಸ್ವಭಾವ ಗುಣದಲ್ಲಿ ಉಂಟಾದ ಬದಲಾವಣೆ ತೋರಿಸುವುದಾದರೆ, ನಾನು ಮೊದಲು ಹೇಗಿದ್ದೆ ಈಗ ಹೇಗಿದ್ದೇನೆ ಎಂದು ತೋರಿಸುವುದಾದರೆ ಅವನೊಂದು ಅದ್ಭುತ ಕೃತ್ಯ ತೋರಿಸುತ್ತಾನೆ. ಅದರ ಪ್ರಭಾವ ನೆರೆಹೊರೆಯವರ ಮೇಲೆ ಬಹಳ ಉನ್ನತ ಮಟ್ಟದ್ದಾಗಿರುತ್ತದೆ. ಒಬ್ಬನು ಒಂದು ಜಮಾಅತನ್ನು ಪ್ರವೇಶಿಸಿ ಆ ಜಮಾಅತಿನ ಘನತೆ ಮತ್ತು ಗೌರವದ ಬಗ್ಗೆ ಲಕ್ಷ್ಯ ನೀಡುವುದಿಲ್ಲವಾದರೆ ಮತ್ತು ಅದರ ವಿರುದ್ಧ ವರ್ತಿಸುವುದಾದರೆ ಅವನು ಅಲ್ಲಾಹನಿಂದ ಹಿಡಿಗೂಡಲ್ಪಡುವನು. ಏಕೆಂದರೆ ಅವನು ತನ್ನನ್ನು ನಾಶಕ್ಕೆ ಗುರಿಪಡಿಸುತ್ತಾನಲ್ಲದೆ ಅನ್ಯರಿಗೆ ಕೆಟ್ಟ ಮಾದರಿ ತೋರಿಸಿಕೊಟ್ಟು ಅವರನ್ನು ಸಾತ್ವಿಕತೆ ಮತ್ತು ಮಾರ್ಗದರ್ಶನದಿಂದ ವಂಚಿತರನ್ನಾಗಿ ಮಾಡುತ್ತಾನೆ. ಆದುದರಿಂದ ನೀವು ನಿಮ್ಮ ಪೂರ್ಣ ಶಕ್ತಿಯಿಂದ ಅಲ್ಲಾಹನೊಡನೆ ಸಹಾಯ ಯಾಚಿಸಿರಿ. ನಿಮ್ಮ ಬಲಹೀನತೆಗಳನ್ನು ದೂರ ಸರಿಸಲು ಪೂರ್ಣವಾಗಿ ಪ್ರಯತ್ನಿಸಿರಿ. ನೀವು ವಿನಯಾನ್ವಿತರಾಗಿ ಸತ್ಯ ಮತ್ತು ದೃಢ ವಿಶ್ವಾಸದೊಂದಿಗೆ ಪ್ರಾರ್ಥಿಸಿರಿ. ಏಕೆಂದರೆ ಅಳಲಿನೊಂದಿಗೆ, ದೃಢವಿಶ್ವಾಸದೊಂದಿಗೆ ಎತ್ತಿದ ಕೈ ಬರಿದಾಗಿ ಮರಳಲಾರದು. ನಮ್ಮ ಸಾವಿರಾರು ಪ್ರಾರ್ಥನೆಗಳು ಅಂಗೀಕಾರ ಪಡೆದಿವೆ ಎಂದು ನಮ್ಮ ಅನುಭವದಿಂದ ಹೇಳುತ್ತೇವೆ. ಈಗಲೂ ಅಂಗೀಕಾರ ಪಡೆಯುತ್ತಿವೆ.

ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಪ್ರಕಾರ ವರ್ತಿಸಿ ನಮ್ಮ ಸ್ವಭಾವಗುಣಗಳನ್ನು ಪ್ರತಿಯೊಂದು ರೀತಿಯಲ್ಲಿ, ಪ್ರತಿಯೊಂದು ಸಂದರ್ಭದಲ್ಲಿ, ಪ್ರತಿಯೊಂದು ಸ್ಥಳದಲ್ಲಿ ಉತ್ತಮೊತ್ತಮವಾಗಿ ಪರಿವರ್ತಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ನಾವು ಅಲ್ಲಾಹನ ಸಂಪ್ರೀತಿಗಳಿಸಲು ನಮ್ಮ ಸ್ವಭಾವಗುಣಗಳ ಮಟ್ಟವನ್ನು ವರ್ಧಿಸುವಂತಾಗಲಿ. ನಾವು ಲೋಕಕ್ಕೆ ತೋರಿಕೆಯಾಗಿ ಹಾಗೆ ಮಾಡುವವರಾಗದಿರಲಿ. ಸೃಷ್ಟಿಗಳ ಬಗ್ಗೆ ಸತ್ಯವಾದ ಸಹಾನುಭೂತಿ ನಮ್ಮ ಹೃದಯಗಳಲ್ಲಿ ಹುಟ್ಟಲಿ. ನಾವು ತಖ್ವದ ಮಟ್ಟವನ್ನು ಉನ್ನತಗೊಳಿಸುವವರಾಗಲಿ. ನಾವು ಈ ಕಾಲದ ಇಮಾಮರನ್ನು ನಂಬಿರುವ ಕಾರಣ ನಮ್ಮ ಯಾವುದೇ ಕೆಲಸ ಇಸ್ಲಾಮಿಗೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಪಕೀರ್ತಿಕರವಾಗದಿರಲಿ. ನಾವು ಇಸ್ಲಾಮಿನ ಸುಂದರ ತತ್ವಗಳನ್ನು ಹಬ್ಬಿಸುವವರಾಗಲಿ. ಲೋಕವನ್ನು ಅವುಗಳಿಂದ ಪ್ರಭಾವಿತವನ್ನಾಗಿ ಮಾಡುವವರಾಗಲಿ. ನಾವು ನಮ್ಮ ಸ್ವಭಾವಗುಣಗಳ ಮಟ್ಟವನ್ನು ವರ್ಧಿಸಲು ಸದಾ ಪ್ರಯತ್ನಿಸುವವರಾಗೋಣ. ನಾವು ಅಲ್ಲಾಹನ ಮುಂದೆ ಭಾಗಿ ಪ್ರಾರ್ಥಿಸುತ್ತಾ ಅಲ್ಲಾಹನಿಂದ ನೆರವನ್ನು ಯಾಚಿಸುವವರಾಗುವಂತೆ ಅಲ್ಲಾಹನು ಮಾಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ ಹೇಳಿದರು:) ನಮಾಝ್ ನಂತರ ಒಂದು ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಮಕರ್ರಮ್ ಶೇಖ್ ಅಬ್ದುಲ್ ಮಜೀದ್ ಬಿನ್ ಶೇಖ್ ಅಬ್ದುಲ್ ಹಮೀದ್ ಸಾಹಿಬರದಾಗಿದೆ. ಹಲ್ಖ ಡಿಫೆನ್ಸ್ ಸೊಸೈಟಿ ಕರಾಚಿ. ೧೫–೨–೨೦೧೮ ರಂದು ೮೮ನೇ ವಯಸ್ಸಿನಲ್ಲಿ ಮೃತರಾದರು. ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. (ಹುಝೂರ್ ಅವರ ಸದ್ಗುಣಗಳನ್ನು ವಿವರಿಸಿದರು).

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 02-03-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon